# ಹರಿಪಾದವಿರಲಿಕ್ಕೆ ಪರದೈವಂಗಳಿಗೆರಗಲೇಕೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Note:** Singer has followed these lyrics.

ರಾಗ: ಸೌರಾಷ್ಟ್ರ ತಾಳ: ಅಟ್ಟ

ಹರಿ ಪಾದವಿರಲಿಕ್ಕೆ ಪರ ದೈವಂಗಳಿಗೆರಗಲೇಕೆ || ಪ ||

ವರ ಮಾಣಿಕವಿದ್ದು ಎರವಿನ ಒಡವೆಯ ಬಯಸಲೇಕೆ || ಅಪ ||

ಪೆತ್ತ ಪಿತನ ಮಾತು ಕಿವಿಯಲಿ ಕೇಳದ ಪುತ್ರನೇಕೆ
ಚಿತ್ತ ಪಲ್ಲಟವಾಗಿ ತಿರುಗುವ ಸತಿಯಳ ಸಂಗವೇಕೆ
ಉತ್ತಮ ಗುರುವನು ನಿಂದನೆ ಮಾಡುವ ಶಿಷ್ಯನೇಕೆ
ಶಕ್ತಿಹೀನನಾಗಿ ಸರ್ವ ಜನರ ಕೂಡೆ ಕ್ರೋಧವೇಕೆ || 1 ||

ಭಾಷೆಯ ಕೊಟ್ಟು ತಪ್ಪುವ ಪ್ರಭುವಿನೊಳಾಸೆಯೇಕೆ
ಕಾಸಿಗೆ ಕಷ್ಟಪಡುವ ಲೋಭಿಯ ಗೆಳೆತನವೇಕೆ
ವೇಶ್ಯೆಯ ನೆಚ್ಚಿ ತನ್ನ ನಾರಿಯ ಬಿಡುವಂಥ ಪುರುಷನೇಕೆ
ಹಾಸಿಗೆಯರಿತು ಕಾಲ ನೀಡಲರಿಯದ ಮನುಜನೇಕೆ || 2 ||

ಚೆನ್ನಾಗಿ ಬಾಳ್ದು ಪುಣ್ಯವ ಮಾಡದ ಮನುಜನೇಕೆ
ಸನ್ನುತ ವಿದ್ಯವ ಮೆಚ್ಚಲರಿಯದ ಅರಸನೇಕೆ
ಅನ್ನವನಿಟ್ಟು ಹಂಗಿಸುತಿರುವರ ಬಾಳದೇಕೆ
ಉನ್ನತ ಪುರಂದರ ವಿಠಲನ ನೆನೆಯದ ಜನುಮವೇಕೆ || 3 ||

**Classification:** Keerthane
**Ankita:** purandara vittala
**Location:** NA
**Category:** Hari Sarvottama

**Sub-Category:** Krishna, daiva, AbharaNa, tande, kivi, maga, patni, sittu, arasa, rokka, mitra, hengasu, hAsige, nara, punya, vidya, arasa, anna, janma,

**Pravachana:** NA

**Explanation:** NA